ಕೊಡುವಾಗ, ಸರ್ಕಾರವು ಈ ಬಿಲ್ಲಿನಲ್ಲಿ ಪರಿಣಾಮ ಹೊಂದುವ ವೈದ್ಯರುಗಳು, ರೋಗಿಗಳ ಅಭಿಪ್ರಾಯವನ್ನು ಕ್ರೋಢೀಕರಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡುವ ಸಲುವಾಗಿ ಎರಡೂ ಸದನಗಳ ಸದಸ್ಯರುಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿರುವುದಾಗಿ ಭರವಸೆಯನ್ನು ಕೊಟ್ಟ ಪ್ರಯುಕ್ತ 1976ರಲ್ಲಿ ಮಾನ್ಯ ಶಾಸಕರಾದ ಶ್ರೀ ಪುಟ್ಟಸ್ವಾಮಿಯವರ ನೇತೃತ್ವದಲ್ಲಿ ಎಂಟು ಜನ ಸದಸ್ಯರುಗಳನ್ನೊಳಗೊಂಡ ಒಂದು ಸಮಿತಿಯನ್ನು ನೇಮಕ ಮಾಡಲಾಗಿತ್ತು. ಈ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಈ ಸಮಿತಿಯು ಮಾಡಿದಂಥ ಶಿಫಾರಸ್ಸಿನಂತೆ ಈ ಆಕ್ಟ್ ಮತ್ತು ರೂಲ್ಸ್‌ನಲ್ಲಿ ಇತ್ತೀಚೆಗೆ ಪರಿಸ್ಥಿತಿಯ ಬದಲಾವಣೆ ಪರಿಗಣನೆಯಾಗಿ ತಿದ್ದುಪಡಿಯಾಗಬೇಕಾಗಿರುವುದರಿಂದ ಈ ಬಗ್ಗೆ ಅಧ್ಯಯನ ನಡೆಯಲು ಅದಷ್ಟು ಬೇಗ ಕ್ರಮ ತೆಗೆದುಕೊಳ್ಳಲಾಗುವುದು. ಮೇಲೆ ಕಾಣಿಸಿದ ಆಕ್ಟ್ ಜಾರಿಗೊಳಿಸಿದಾಗ, ಈ ನರ್ಸಿಂಗ್ ಹೋಮ್‌ಗಳ ಮೇಲೆ ಸರ್ಕಾರಕ್ಕೆ ಹತೋಟಿ ಬರುತ್ತದೆ. ಆದ್ದರಿಂದ ಅದಷ್ಟು ಬೇಗ ಈ ಆಕ್ಟ್‌ನ್ನು ಸೂಕ್ತ ತಿದ್ದುಪಡಿಯೊಂದಿಗೆ ಜಾರಿಗೊಳಿಸಿ ನರ್ಸಿಂಗ್ ಹೋಮ್‌ಗಳ ವ್ಯವಹಾರದ ಮೇಲೆ ಸುಧಾರಣೆಯನ್ನು ಮಾಡಲಾಗುವುದು.

4. ಮೈಸೂರು ಜಿಲ್ಲೆಗೆ ಯೋಜನೆ ಮತ್ತು ಯೋಜನೇತರ ಬಾಬುಗಳಿಗೆ ಹಣ ಬಿಡುಗಡೆಯಾಗದೆ ಕಾಮಗಾರಿಗಳು ಸ್ಥಗಿತ.

ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಗೆ ಯೋಜನೆ ಮತ್ತು ಯೋಜನೇತರ ಬಾಬುಗಳಲ್ಲಿ 12.49 ಕೋಟಿ ರೂಪಾಯಿಗಳು 12.82 ಕೋಟಿ ರೂಪಾಯಿಗಳು ಕ್ರಮವಾಗಿ ಬಿಡುಗಡೆಯಾಗದಿರುವುದರಿಂದ ಅನೇಕ ಕಾಮಗಾರಿಗಳು ಸ್ಥಗಿತವಾಗಿದೆ. ನೀರು ಪೂರೈಕೆ ಮತ್ತು ನೈರ್ಮಲ್ಯ ಯೋಜನಾ ಕಾರ್ಯಕ್ರಮಗಳಿಗೆ ಒಟ್ಟು ರಾಜ್ಯ ಮತ್ತು ಕೇಂದ್ರದ ಪಾಲು ಸೇರಿ 411.95 ಲಕ್ಷ ರೂಪಾಯಿಗಳು ನಿಗದಿಯಾಗಿದ್ದು ಸರ್ಕಾರದ 207.80 ಲಕ್ಷ ರೂಪಾಯಿಗಳು ಬಿಡುಗಡೆಯಾಗಿರುತ್ತದೆ. ಇನ್ನೂ 204.15 ಲಕ್ಷ ರೂಪಾಯಿಗಳು ಬಿಡುಗಡೆಯಾಗಬೇಕಾಗಿದೆ. ಇದರಿಂದ ಅನೇಕ ಕುಡಿಯುವ ನೀರಿನ ಕಾಮಗಾರಿಗಳು ಸ್ಥಗಿತವಾಗಿವೆ. ಹನೂರು ಕ್ಷೇತ್ರದಲ್ಲಿ ಕಿರು ನೀರು ಸರಬರಾಜು ಯೋಜನೆಗೆ ಗಡಿ ಅಭಿವೃದ್ಧಿ ಯೋಜನೆಯ ಹಣದಲ್ಲಿ 2.10 ಲಕ್ಷ ರೂಪಾಯಿಗಳನ್ನು ಏಳು ಗ್ರಾಮಗಳಲ್ಲಿ ಕೈಗೊಳ್ಳುವಂತೆ ಬಹಳ ಹಿಂದೆಯೇ ಹಣವನ್ನು ಮೈಸೂರು ಜಿಲ್ಲಾ ಪರಿಷತ್‌ಗೆ ಜಮಾ ಮಾಡಿಟ್ಟು ಉಳಿಕೆ ಹಣವನ್ನು ಜಿಲ್ಲಾ ಪರಿಷತ್ ತುಂಬಲು ಒಪ್ಪಕೊಂಡು ಸರ್ಕಾರದಿಂದ ಸಕಾಲದಲ್ಲಿ ಹಣ ಬಿಡುಗಡೆಯಾಗದಿರುವುದರಿಂದ ಕುಡಿಯುವ ನೀರಿನ ಬವಣೆ ಹೇಳತೀರದಾಗಿದೆ. ದಯಮಾಡಿ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಈ ಕಡೆ ಗಮನಹರಿಸಿ, ಪೂರ್ತಿ ಹಣವನ್ನು ಬಿಡುಗಡೆ ಮಾಡಿ ನಾನು ವಂತಿಗೆ ಕೊಟ್ಟಿರುವ ಕಾಮಗಾರಿಗಳನ್ನು ಕೂಡಲೇ ಪೂರೈಸಬೇಕೆಂದು ಮೈಸೂರು ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಯವರಿಗೆ ಕೂಡಲೇ ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲಾ ಪರಿಷತ್ತಿನ ಯೋಜನೆ ಮತ್ತು ಯೋಜನೇತರ ಅಡಿಯಲ್ಲಿ ಮಂಜೂರಾದ ಹಣ ಮತ್ತು ಬಿಡುಗಡೆಯಾದ (8-3-93 ರವರೆಗೆ) ಹಣ ಈ ರೀತಿ ಇದೆ.

	ಮಂಜೂರಾದ ಹಣ (ರೂ. ಲಕ್ಷಗಳಲ್ಲಿ)			ಬಿಡುಗಡೆಯಾದ ಹಣ (ರೂ. ಲಕ್ಷಗಳಲ್ಲಿ)		
	ರಾಜ್ಯ	ಕೇಂದ್ರ	ಒಟ್ಟು	ರಾಜ್ಯ	ಕೇಂದ್ರ	ಒಟ್ಟು
ಯೋಜನೆ	2010.57	2393.76	4404.33	1577.69	2023.74	3601.43
ಯೋಜನೇತರ	6916.02	-	6916.02	6152.02	-	6152.02
ಒಟ್ಟು	8926.59	2393.76	11326.35	772.71	2023.74	9753.45

ಬಿಡುಗಡೆಯಾಗಬೇಕಾದ ಹಣ ರೂ. 802.90 ಲಕ್ಷ (ಯೋಜನೆ)
ರೂ. 764.00 ಲಕ್ಷ (ಯೋಜನೇತರ)

ಕುಡಿಯುವ ನೀರು ಪೂರೈಕೆ ಮತ್ತು ನೈರ್ಮಲ್ಯ ಯೋಜನೆ ಕಾರ್ಯಕ್ರಮದಡಿಯಲ್ಲಿ ಮೈಸೂರು ಜಿಲ್ಲಾ ಪರಿಷತ್‌ಗೆ ಮಂಜೂರಾದ ಹಣ ಮತ್ತು ಬಿಡುಗಡೆಯಾದ ಹಣ ಈ ರೀತಿ ಇದೆ.

ಯೋಜನೆ :

ರಾಜ್ಯ:	ಮಂಜೂರಾದ ಹಣ	ರೂ. 199.25 ಲಕ್ಷ	
	ಬಿಡುಗಡೆಯಾದ ಹಣ	ರೂ. 132.80 ಲಕ್ಷ	
		ರೂ. 66.45 ಲಕ್ಷ	
ಕೇಂದ್ರ :		ನೀರು ಸರಬರಾಜು	ನೈರ್ಮಲ್ಯ
1)	ಮಂಜೂರಾದ ಹಣ	ರೂ. 199.70 ಲಕ್ಷ	ರೂ. 13.00 ಲಕ್ಷ
	ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣದ ಆಧಾರದ ಮೇಲೆ ಮೈಸೂರು ಜಿಲ್ಲಾ ಪರಿಷತ್‌ಗೆ ನಿಗದಿಯಾದ ಹಣ	ರೂ. 141.51 ಲಕ್ಷ	-
	ಬಿಡುಗಡೆಯಾದ ಹಣ	ರೂ. 141.51 ಲಕ್ಷ	-

ಯೋಜನೇತರ :

ರಾಜ್ಯ:		ಮಂಜೂರಾದ ಹಣ	ರೂ. 8.10 ಲಕ್ಷ
	ಬಿಡುಗಡೆಯಾದ ಹಣ	ರೂ. 5.36 ಲಕ್ಷ	

ಇನ್ನು ಬಿಡುಗಡೆಯಾಗಬೇಕಾಗಿರುವ ಹಣವನ್ನು, ಇದುವರೆಗೂ ಖರ್ಚು ಮಾಡಿರುವ ಆಧಾರದ ಮೇಲೆ ಬಿಡುಗಡೆ ಮಾಡಲು ಯೋಜಿಸಲಾಗುವುದು.

ಹನೂರು ಕ್ಷೇತ್ರದ 7 ಹಳ್ಳಿಗಳಾದ ಜಿ.ಕೆ. ಹೊಸೂರು, ಕಂಪಯ್ಯನ ಹಳ್ಳಿ, ಹುಣಸೇಪಾಳ್ಯ, ಬೆಂಗಡಿ, ಬೆಳ್ಳೂರು, ಗಂಗನದೊಡ್ಡ ಮತ್ತು ಜಗ ಗಳಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ಜಿಲ್ಲಾಧಿಕಾರಿ, ಮೈಸೂರು ಇವರು ಈ ಗ್ರಾಮಗಳಿಗೆ ಕಿರು ನೀರು ಸರಬರಾಜು ಯೋಜನೆಗಳನ್ನು ಮಂಜೂರು ಮಾಡಿದ್ದಾರೆ ಮತ್ತು ಗಡಿ ಪ್ರದೇಶದ ಅಭಿವೃದ್ಧಿ ಯೋಜನೆಯಡಿಯಿಂದ ಒಂದು ಗ್ರಾಮಕ್ಕೆ ರೂ. 30,000-00 ರಂತೆ ಒಟ್ಟು ರೂ. 2.10 ಲಕ್ಷ ಹಣವನ್ನು ಬಿಡುಗಡೆ ಮಾಡಿದ್ದಾರೆ.

ಒಂದು ಕಿರು ನೀರು ಸರಬರಾಜು ಯೋಜನೆಗೆ ಸುಮಾರು ರೂ. 1.00 ಲಕ್ಷ ದಿಂದ ರೂ.

1.20 ಲಕ್ಷವಾಗುತ್ತದೆ. ಈ ಯೋಜನೆಗಳನ್ನು ಮುಗಿಸಲು ಇನ್ನು ಸುಮಾರು ರೂ. 5.00 ಲಕ್ಷ ಹಣ ಬೇಕಾಗಿರುತ್ತದೆ. ಈ ಹಣವನ್ನು ಜಿಲ್ಲಾಧಿಕಾರಿಯವರು ಬಿಡುಗಡೆ ಮಾಡಬೇಕಾಗುತ್ತದೆ. ಮಿಕ್ಕ ಹಣವನ್ನು ಬಿಡುಗಡೆ ಮಾಡಲು ಯೋಜನಾ ಇಲಾಖೆಯು ಕ್ರಮ ತೆಗೆದುಕೊಳ್ಳಬೇಕಾಗಿದೆ.

೬. ಬೆಂಗಳೂರು-ಕುಮಟಾಕ್ಕೆ ಎರಡು ಸುಖಾಸೀನ ಬಸ್‌ಗಳನ್ನು ಓಡಿಸುವುದು.

ಶ್ರೀ ಆರ್.ಎನ್. ನಾಯ್ಕ್ (ಭಟ್ಕಳ):- ಮಾನ್ಯ ಅಧ್ಯಕ್ಷರೆ, ಬೆಂಗಳೂರು-ಕುಮಟಾಕ್ಕೆ ಸುಖಾಸೀನ ಬಸ್ ಓಡಿಸುತ್ತಿದ್ದು ಒಂದು ಬಸ್ ಸಾಧಾರಣ ಸ್ಥಿತಿಯಲ್ಲಿದೆ. ಇನ್ನೊಂದು ಬಸ್ ಸಂಪೂರ್ಣ ಕೆಟ್ಟಿದ್ದು ಮಳೆಗಾಲದಲ್ಲಿ ಸೋರುವುದಲ್ಲದೆ ವಿಪರೀತ ಕೆಟ್ಟ ಶಬ್ದ ಬರುತ್ತಿದ್ದು ಸಂಬಂಧಿಸಿದ ಅಧಿಕಾರಿಗಳಿಗೆ ದೂರವಾಣಿ ಮುಖಾಂತರ ತಿಳಿಸಿದರೂ ಪ್ರಯೋಜನವಾಗಿಲ್ಲ. ದಯಮಾಡಿ ನಾಳೆಯಿಂದಲೇ ಎರಡು ಒಳ್ಳೆ ಬಸ್ಸುಗಳನ್ನು ಬೆಂಗಳೂರು-ಕುಮಟಾಕ್ಕೆ ಓಡಿಸುವುದರ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಸಚಿವರು) : The Super Deluxe services between Bangalore and Kumta are operated by IInd Depot of Bangalore Division, Keeping in view the long distance, efforts have been made to fix vehicles for this route and buses bearing Nos. KA 01 F 5010 and KA 01 F 5420 have been fixed for this route. During the month of February and till date, only on two occasions different vehicles were operated due to exigencies. On 22-2-1993, KA 01 F 5357 and on 6-3-1993 MEF 1893 were operated on this route.

The details of age and progressive Kms covered by the fixed vehicles are as under :

Vehicle No.	Date of Registration	Progressive KMs.
1. KA 01 F 5010	26.7.1990	5,09,622
2. KA 01 F 5420	14.7.1992	1,17,768

Super Deluxe vehicles of KSRTC are normally replaced when they perform beyond 3,50,000 KMs from the date of commissioning depending upon their body condition. However, due to paucity of new vehicles it is not always possibly to replace vehicles as required.

Bangalore Division operates 98 Super Deluxe schedules with 108 vehicles and as many as 58 vehicles have become due for replacement and